doc -396
T.P-2

(1)

R No KRNN 12 ಶ್ರೀ 6 - 11 - 1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [3 ಸ್ಪಿ

ನಗರಾಭಿವೃದ್ಧಿ ಸಮಿತಿ, ಮೈಸೂರು

ನಂ. ಬಿ 1. 28-74-75 ತಾ|| 26-10-1974

ನೈಟುಗಳ ಬಹಿರಂಗ ಹರಾಜು

ಮೈಸೂರು ಕಾರಂಜಿ ಟ್ಯಾಂಕ್, ಎರಡನೇ ಹಂತದ ಬಡಾವಣೆಯ (ಕುರುಬಾರಹಳ್ಳಿ ಹತ್ತಿರ) ಕೆಳಕಂಡ ವಾಸಸ್ಥಳದ 28 ತಿರುವು (ಕಾರ್ನರ್) ನಿವೇಶನಗಳನ್ನು 1974 ನೇ ನವೆಂಬರ್ ಮಾಹೆ 9 ರಂದು ಮತ್ತು 10 ರಂದು (ಎರಡು ದಿನಗಳು) ಬೆಳಿಗ್ಗೆ 9-30 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಲಾಗುವುದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲು ನಗರಾಭಿವೃದ್ಧಿ ಸಮಿತಿ ಹರ್ಷಿಸುತ್ತದೆ.

ಈ ನಿವೇಶನಗಳ ಹರಾಜು ಮಾತಾಟವು ನಗರಾಭಿವೃದ್ಧಿ ಸಮಿತಿ ತಿರುವು ಮತ್ತು ಪಾಣಿಜ್ಯ (ಕಾರ್ನರ್ ಮತ್ತು ಕಮರ್ಷಿಯಲ್) ನಿವೇಶನಗಳ ಹಂಚಿಕೆ ನಿಬಂಧನೆ (1973) ಪ್ರಕಾರ ಇರುತ್ತದೆ. ಹರಾಜಿನಲ್ಲಿ ಭಾಗವಹಿಸುವವರು ಮುಂಗಡವಾಗಿ ರೂ. 1,000-00 ಗಳನ್ನು ಪಾವತಿ ಮಾಡಬೇಕು ಮತ್ತು ಹರಾಜುದಾರರು ಅತ್ಯಂತ ಹೆಚ್ಚು ಬೊಬಲಗಿನ ಶೇಕಡ 25 ರಷ್ಟನ್ನು ಸ್ಥಳದಲ್ಲೇ ಪಾವತಿ ಮಾಡಬೇಕು. ಚೆಕ್‌ಗಳನ್ನು ಪಡೆಯಲಾಗುವುದಿಲ್ಲ. ಯಾವುದೇ ಕಾರಣವನ್ನು ತಿಳಿಸದೆ ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ನಗರಾಭಿವೃದ್ಧಿ ಸಮಿತಿಗೆ ಇರುತ್ತದೆ. ವಾಸಸ್ಥಳದ (ಕಾರ್ನರ್) ತಿರುವು ನಿವೇಶನಗಳ ಹರಾಜಿನ ಷರತ್ತುಗಳನ್ನು ನಗರಾಭಿವೃದ್ಧಿ ಸಮಿತಿಯ ಛೇರ್ಮನ್ ಕಛೇರಿಯಿಂದ ಕೆಲಸದ ದಿನಗಳಲ್ಲಿ ಬೆಳಿಗ್ಗೆ 11 ರಿಂದ ಸಂಜೆ 5 ಘಂಟೆಯ ವರೆಗೆ ಪಡೆಯಬಹುದು.

ನಿವೇಶನಗಳ ಹರಾಜನ್ನು "ಆಯಾಯಾ ನಿವೇಶನಗಳ" ಆಧಾರದ ಮೇಲೆ ಮಾಡಲಾಗುವುದು. ನಿವೇಶನಗಳನ್ನು ಕೊಳ್ಳಲು ಆಪೇಕ್ಷಿಸುವವರು ಹರಾಜಿಗೆ ಪೂರ್ವಭಾವಿಯಾಗಿ ನಿವೇಶನಗಳನ್ನು ನೋಡಿಕೊಂಡು ಗೊತ್ತಾದ ಕಾಲಕ್ಕೆ ಸರಿಯಾಗಿ ಹರಾಜು ಸ್ಥಳದಲ್ಲಿ ಹಾಜರಿರಬೇಕೆಂದು ವಿನಂತಿಸಲಾಗಿದೆ.

ನಿವೇಶನಗಳ ವಿವರ ಈ ಕೆಳಕಂಡಂತೆ ಇರುತ್ತದೆ

ಕ್ರಮ ಸಂಖ್ಯೆ	ಕಾರ್ನರ್ ನಿವೇಶನಗಳ ಸಂಖ್ಯೆ	ಅಂದಾಜು ಅಳತೆ ಅಡಿಗಳಲ್ಲಿ	ಅಂದಾಜು ಅಳತೆ ಮೀಟರುಗಳಲ್ಲಿ
1	1	125' x 120'	38 1 x 36 . 57
2	1	90' x 120'	27 . 43 x 36 . 57
3	8	80' x 50'	24 . 38 x 15 . 24
4	8	70' x 90'	21 . 33 x 27 . 43
5	10	45' x 60'	13 . 71 x 18 . 28

[ad-venture]

ಸಹಿ/- ಬಿ. ಎನ್. ಕೆಂಗೇಗೌಡ,
ಛೇರ್ಮನ್, ನಗರಾಭಿವೃದ್ಧಿ ಸಮಿತಿ, ಮೈಸೂರು

ದಬ್ಬಾಳಿಕೆ ಪ್ರತಿಭಟನೆ

ಪಾಟ್ನಾ– ಸೋಮವಾರ ಜನತಾ ವಾರ್ಫ್ ಮೇಲೆ ನಡೆದ ಪೋಲೀಸು ದಬ್ಬಾಳಿಕೆ ಪ್ರತಿಭಟಿಸಿ ಜಯಪ್ರಕಾಶರು ಕರೆದಿದ್ದ 12 ಗಂಟೆಗಳ ಬಂದ್ ನಿನ್ನೆ ಯಶಸ್ವಿಯಾಗಿ ನಡೆಯಿತು – ಅಡ್ವೊಕೇಟರು ಕೋರ್ಟನ್ನು ಬಹಿಷ್ಕರಿಸಿದ್ದರಿಂದ ಹೈ ಕೋರ್ಟ್‌ನಲ್ಲಿ ಕೆಲಸ ನಡೆಯಲಿಲ್ಲ – ಬಂದ್‌ನಲ್ಲಿ ಭಾಗವಹಿಸದವರು ಆಸ್ಪತ್ರೆ, ನೀರು ಮತ್ತು ವಿದ್ಯುತ್ ಸರಬರಾಜು, ಔಷಧಿ ಅಂಗಡಿಗಳ ಪತ್ರಿಕೆಗಳು, ವಾರ್ತಾಸಂಸ್ಥೆಗಳು, ಖಾಸಗಿ ಕಾರು, ಸೈಕಲ್‌ರಿಕ್ಷಾಗಳಿಗೆ ವಿನಾಯಿತಿ ಕೊಡಲಾಗಿತ್ತು.

★

ತಮಿಳಿನಲ್ಲಿ ತೀರ್ಪು

ತಿರುನಲ್ವೇಲಿ– ಪ್ರಥಮವಾಗಿ ತಮಿಳಿನಲ್ಲಿ ತೀರ್ಪನ್ನು ಇಲ್ಲಿಯ ಸೆಷನ್ಸ್ ಜಡ್ಜರು ಕೊಟ್ಟರು – ಮನೆಗೆ ಬೆಂಕಿ ಇಟ್ಟ ಆಪಾದನೆಗೆ ಗುರಿಯಾಗಿದ್ದ ಇಬ್ಬರನ್ನು ಬಿಡುಗಡೆ ಮಾಡಿದರು.

★

ಪಾರ್ಸಲ್‌ನಲ್ಲಿ ಮಾನವನ ಕೈ

ಮದರಾಸು — ಎಗ್ಮೋರ್‌ನಲ್ಲಿರುವ ಕೃಷ್ಣಮೂರ್ತಿ ಎನ್ನುವವರಿಗೆ ಮಾನವನ ಕೈ ಇದ್ದ ವಿಚಿತ್ರ ಪಾರ್ಸಲ್ ಬಂದಿತು – ಅದನ್ನು ಪೋಲೀಸರ ತನಿಖೆಗೆ ಕೊಡಲಾಯಿತು – ಅವರು ಅದನ್ನು ನಿಪುಣರ ಪರೀಕ್ಷೆಗೆ ಕಳುಹಿಸಿರುವರು.

★

ಪೌರಸಭಾ ಸದಸ್ಯರಲ್ಲಿ ಹೊಡೆದಾಟ

ನವದೆಹಲಿ– ಮೇಯರ್ ಕೊಠಡಿ ಹೊರಗೆ ಕಾಂಗ್ರೆಸ್ ಮತ್ತು ಜನಸಂಘದ ಪುರಸಭಾ ಸದಸ್ಯರಲ್ಲಿ ಬಯ್ಯಾಟ ಹೊಡೆದಾಟ ನಡೆಯಿತು.

★

ಹಶುವಿನ ಸಾವು ತಪ್ಪಿಸಿ

ರೋಂ— ವಿಶ್ವದಲ್ಲಿ ಸಾವುಹಾಹಿಕ ಹಶುವಿನ ಸಾವಿನ ಬೆದರಿಕೆ ಎಚ್ಚರಿಸಲು ಸೂಕ್ತ ಕಾರ್ಯ ಕೈಗೊಳ್ಳುವಂತೆ, ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಶ್ರೀ ವಾಲ್ಡ್‌ಹೇಮ್ ವಿಶ್ವ ಆಹಾರ ಸಮ್ಮೇಳನವನ್ನು ಉದ್ಘಾಟಿಸುತ್ತಾ ಕರೆಕೊಟ್ಟರು.

ಶಾಸನಸಭೆ ವಿಸರ್ಜಿಸುವುದಿಲ್ಲ

ಶಿವದೆಹಲಿ— ರಸ್ತೆಗಳಲ್ಲಿ ರಾಜಕೀಯ ಘೋಷಣೆಗಳನ್ನು ಕೂಗುತ್ತಿರುವೆಂದು ಬೀಹಾರು ಶಾಸನಸಭೆಯನ್ನು ವಿಸರ್ಜಿಸುವುದಿಲ್ಲವೆಂದು ಪುನಃ ಪ್ರಧಾನಿ ಇಂದಿರಾರವರು ಭಾರತ ಸೇವಕ ಸಮಾಜದೊಡನೆ ಮಾತನಾಡುತ್ತಾ ಹೇಳಿದರು.

●

ಜೆ ಪಿ ರವರಿಗೆ ಗಾಯ

ಪಾಟ್ನಾ— ಸೋಮವಾರದ ಘಟನೆಗಳಲ್ಲಿ ಶ್ರೀ ಜಯಪ್ರಕಾಶರಿಗೆ 3 ಏಟಿನ ಗಾಯಗಳಾಗಿರುವದೆಂದು ಅವರನ್ನು ಪರೀಕ್ಷಿಸಿ ಇಬ್ಬರು ಸರಕಾರಿ ಡಾಕ್ಟರುಗಳು ಹರದಿ ಮಾಡಿದ್ದಾರೆ – ಇವರಿಗೆ ಗಾಯವಾದುದಕ್ಕೆ ಮನನೊಂದ ಪಾಟ್ನಾದ ಅಹಳಿತ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ನರ್ಮದೇಶ್ವರ ರಂಜರು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ

★

ಸರಕಾರದ ಅಡಳಿತಕ್ಕೆ ಕ್ಯಾಂಟೀನ್

ಬೆಂಗಳೂರು — ಸೆಕರ್ಟೇರಿಯಟ್ಟಿನ ಕ್ಯಾಂಟೀನ್ ಸರಿಯಾಗಿ ಸೇವೆ ಸಲ್ಲಿಸುತ್ತಿಲ್ಲವೆಂದು ದೂರುಗಳು ಬಂದಿರುವುದರಿಂದ ಅದನ್ನು ಸರಕಾರವೇ ವಹಿಸಿಕೊಂಡು ಒಂದು ಸಮಿತಿ ಮೂಲಕ ನಡೆಸಲು ನಿರ್ಧರಿಸಿದೆ.

★

12 ಬೌನ್ಸು ಅಕ್ಕಿ ಕೇಳಿಕೆ

ತಿರುವನಂತಪುರಂ— ಸರಕಾರಿ ಕಛೇರಿಯ ಪ್ರಮುಖ ದ್ವಾರದಲ್ಲಿ, ರೇಷನ್ ಪೋಟಾವನ್ನು ಪ್ರತಿಭಟಿಸಿ, ಸರಕಾರಿ ಕಛೇರಿಯವರೂ ಸೇರಿ ವಿವಿಧ ಸೇವಾ ಸಂಸ್ಥೆಗಳ 500 ಸ್ವಯಂಸೇವಕರು 12 ಬೌನ್ಸು ಕೇಳಿಕೆ ಹಾಕಿ, ಧರಣಿ ಕೂಡಿಸಿದರು.

●

ಡೆಟನೂಗಳ ಬಿಡುಗಡೆ

ಬೆಂಗಳೂರು– ಡೆಟನೂಗಳಾಗಿದ್ದ ಶ್ರೀಗಳಾದ ಬೆಳ್ಳಿ ವ್ಯಾಪಾರಿ ಶ್ರೀಪಾಸಚೆಟ್ಟಿ, ಕೆಸರ್‌ಲಾಲ್ ಜೈನ್, ಮೋಹನಲಾಲ್, ಚಂಪಾಲಾಲ್, ದೇವಿಚಂದ್ ಮತ್ತು ಮಾನಿಕ್ ಪಾರವಳುಗಳ ಬಿಡುಗಡೆಗೆ ಸೈ. ಕೋರ್ಟ್ ಆಜ್ಞೆ ಮಾಡಿದೆ.

ರಾಜ್ಯ ಹಾರ್ಡ್ ಕೇಂದ್ರದ ಸಹಾಯಕ ನಿರ್ದೇಶಕರು

ಬೆಂಗಳೂರು— ರಾಜ್ಯದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಪಾಣಾಪುರೆಯವರು ಪ್ರೊಬೇಷನ್ ಅವಧಿಯನ್ನು ಕೃಪ್ತಿಕರವಾಗಿ ಮುಗಿಸಿದ್ದು ಅವರನ್ನು ಬೆಂಗಳೂರಿನಲ್ಲಿ ರಾಜ್ಯ ವಾರ್ತಾ ಕೇಂದ್ರದಲ್ಲಿ ಸಹಾಯಕ ನಿರ್ದೇಶಕರಾಗಿ ಶ್ರೀ ಅವರ ಸ್ಥಾನದಲ್ಲಿ ನೇಮಿಸಲಾಗಿದೆ

ಹರಿಜನ ಸಮ್ಮೇಳನ

ಮೈಸೂರು— ಈ ತಾಲ್ಲೂಕು ಹರಿಜನರ ಸಮ್ಮೇಳನವನ್ನು ಸಂಘಟಿಸುತ್ತಾ, ಗ್ರಾಮಾಂತರ ಪ್ರದೇಶದಲ್ಲಿರುವ ಹರಿಜನರು ಸಂಘಟನಾಶಕ್ತಿಯನ್ನು ಬೆಳೆಸಿಕೊಂಡು ಮುಖಂಡತ್ವವನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕೆಂದು ಹೇಳಿದರು

ಪಂಜಾಬಿನಿಂದ ಗೋಧಿ

ಬೆಂಗಳೂರು— ಪಂಜಾಬಿನಿಂದ ಹೊಸದಾಗಿ 10000 ಟನ್ನು ಗೋಧಿ ಪಡೆಯಲು ಸರಕಾರ ಪ್ರಯತ್ನಿಸುತ್ತಿರುವುದಾಗಿ ತಿಳಿಸಲಾಗಿದೆ.

ಕುಟುಂಬ ಯೋಜನ ಬಜೆಟ್

ನವದೆಹಲಿ— 74-75 ಕ್ಕೆ ಕುಟುಂಬ ಯೋಜನಾ ಬಜೆಟ್ ರೂ 87 ಕೋಟಿಯಿಂದ 52 ಕೋಟಿಗೆ ಇಳಿಸಲಾಯಿತು

ಆಶಯವು ಸಫಲವಿಲ್ಲ

ಪಾಟ್ನಾ— ಸೋಮವಾರ 5 ಗಂಟೆಗಳಿಗೂ ಹೆಚ್ಚಾಗಿ ಸಾರಿಗೆ ಬಸ್‌ನಲ್ಲಿ ಕುಳಿತಿದ್ದ ಶ್ರೀ ಜಯಪ್ರಕಾಶ ನಾರಾಯಣರು, ಜನತಾ ಸಾಮೂಹಿಕ ಪ್ರತಿನಿಧಿಯೆಯಿಂದ ಸರ್ಕಾರಿ ಕಛೇರಿ ಮತ್ತು ಶಾಸನಸಭೆ ಘೇರಾವೋ ಆಶಯವು ಸಾಧಿಸಲ್ಪಟ್ಟಿತೆಂದು ಪತ್ರಿಕೆಯವರಿಗೆ ತಿಳಿಸಿದರು – ಇನ್ನು ಮುಂದೆ ಸೂಚನೆ ಕೊಡದೆ ಘೇರಾವೋ ಮಾಡಲಾಗುವುದೆಂದು ಹೇಳಿದರು – ಪ್ರಧಾನಿಯರು ವೈಶಿಷ್ಟ್ಯಗಳಿಗಿಂತ ಹೆಚ್ಚು ಅಧಿಕಾರವನ್ನು ಅನುಭವಿಸುತ್ತಿರುವರೆಂದೂ, ಒಂದು ಕಾಲದಲ್ಲಿ ಅತಿ ಶಕ್ತಿಯುತರಾಗಿದ್ದರೆಂದೂ, ಕಾಂಗ್ರೆಸ್ ಪಾರ್ಟಿಯಲ್ಲಿನ ಪ್ರಾತ್ಯಕ್ಷಾಯುಷ್ಯ ಮತ್ತು ಪ್ರಜಾಪ್ರಭುತ್ವವನ್ನು ನಪುಂಸಕತ್ವಗೊಳಿಸುತ್ತಿರುವುದೂ ಅವರ ಸ್ವಕೂಪವನ್ನು ತಗ್ಗಿಸಿದೆ ಎಂದೂ ತಿಳಿಸಿದರು.

ವುಡ್‌ಲಾಂಡ್ 8 11 74 ರಿಂದ

ಅಮೋಘ ಪ್ರಾರಂಭ

ಕಾಜೋಲ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಜೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೫ ಪ್ರದರ್ಶನಗಳು

ಅ ಪೆ ರಾ 8 11 74 ರಿಂದ

ಪಾತ್ರ – ಮಹೇಂದರ್ ಸಾಂಘಿ ನೀಲಂ ಮೆಹ,
ಅರುಣ ಇರಾನಿ, ಶಾಸಾ ಮುರಾದ್

ಪ್ರೂಜ ವರ್ಣದ ಅಮೋಘ ಹಿಂದಿ ಚಿತ್ರ

ಖೂನ್ ಕಿ ಕೀಮತ್

ಸಂಗೀತ – ಸೋನಿಕ್ ಓಮಿ ನಿರ್ದೇಶನ – ಶಿಬು ಮಿತ್ರ,

ದಿನ ೩ ಪ್ರದರ್ಶನಗಳು

Remember

You are quite safe in your dealings with

Bank Road Bahusar

Firm Noted for Genuine Good Business

Quality Printing Neat Binding

Lakshminarasimha Press

Sivarampet, Mysore 1

Help The Gorakshana

— Humanitarian Propaganda Monthly....

Protect the Cow

SHAKTI

SUDHA

A Superb Tonic

Contribute Liberally
to the National Defence Fund

Edited Printed and Published by Dharmapracharanirata M S Krishna Rao (Proprietor) at the Satyavadi Press, Chamarajapuram Mysore